59

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರ ನಿಯಮ-72ರ ಸೂಚನೆಗೆ ಉತ್ತರ

***

**ವಿಷಯ:**

ರಾಜ್ಯ ಸರಕಾರ ಹೊಸ ಮದ್ಯದಂಗಡಿಗಳಿಗೆ ಅನುಮತಿ ಸ್ಥಗಿತಗೊಳಿಸಿದ್ದರಿಂದ ಪ್ರವಾಸೋದ್ಯಮದ ಹೆಸರಿನಲ್ಲಿ ಸಿಎಲ್-7 ಸನ್ನದು ಮೂಲಕ ಎಲ್ಲೆಂದರಲ್ಲಿ ಮದ್ಯ ಮಾರಾಟ ಮಾಡಲು ಅವಕಾಶ ನೀಡಲಾಗಿತ್ತು. ಆದರೆ ಸಿಎಲ್-7 ಲೈಸನ್ಸ್ ಪಡೆಯಲು ಹಲವು ನಿಯಮಗಳಿವೆ. ಆದರೆ ಅಬಕಾರಿ ಸನ್ನದು ಪಡೆಯುವ ಉದ್ದೇಶದಿಂದಲೇ ಪ್ರಸ್ತಾವನೆಯನ್ನು ಸೂಕ್ತ ದಾಖಲಾತಿಗಳಿಲ್ಲದೆ ಕೆಲವು ಅಧಿಕಾರಿಗಳ ಬೆಂಬಲದಿಂದ ಅಕ್ರಮವಾಗಿ ನಡೆಯುತ್ತಿದೆ. ಸಿಎಲ್-7 ಸನ್ನದು ನೀಡಲು ಕೆಲವು ನಿಯಮಗಳು ಕಡ್ಡಾಯವೆಂದು ಆಯುಕ್ತರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಇದರನ್ವಯ ಉದ್ದೇಶಿತ ಕಟ್ಟಡಕ್ಕೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆಯಬೇಕು. ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ಸೌಲಭ್ಯವನ್ನು ಹೊಂದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕಾಗಿದೆ. ಆದರೆ ಈ ನಿಯಮಗಳನ್ನು ಗಾಳಿತೂರಿ ಪ್ರವಾಸೋದ್ಯಮದ ಹೆಸರಿನಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿದ್ದು, ಭ್ರಷ್ಟಾಚಾರ ಹೆಚ್ಚಾಗಿದೆ ಈ ವಿಷಯವನ್ನು ಮಾನ್ಯ ಅಬಕಾರಿ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ:**

ಸರ್ಕಾರವು 1992ನೇ ಸಾಲಿನಿಂದ ಹೊಸದಾಗಿ ಸಿಎಲ್-2 ಮತ್ತು ಸಿಎಲ್-9ಸನ್ನದನ್ನು ನೀಡಲು ನಿರ್ಬಂಧಿಸಿರುತ್ತದೆ. ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4 ರನ್ವಯ ಸಿಎಲ್-7 ಸನ್ನದು ಮಂಜೂರಾತಿ ಕೋರಿ ಇದೇ ನಿಯಮ 8, 8-ಎ ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳನ್ನು ಸರ್ಕಾರಕ್ಕೆ ಪಾವತಿಸಿ ಅರ್ಜಿ ಸಲ್ಲಿಸಿದ್ದಲ್ಲಿ ಇದೇ ನಿಯಮ 4-ಬಿ ಅನ್ವಯ ಅರ್ಜಿದಾರರು ಸನ್ನದು ಹೊಂದಲು ಅರ್ಹರಿರುವ ಬಗ್ಗೆ ಪರಿಶೀಲಿಸಿಕೊಂಡು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು,1967 ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳವಾಗಿರುವ ಬಗ್ಗೆ ಆಯಾ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಖಚಿತಪಡಿಸಿಕೊಂಡು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 5 ರನ್ವಯ ಸನ್ನದು ಮಂಜೂರಾತಿ ಸಂಬಂಧ ಪೂರ್ವಾನುಮತಿಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಹೊಂದಿದ್ದು, ಸದರಿಯವರ ಶಿಫಾರಸ್ಸನ್ನು ಪರಿಗಣಿಸಿ, ಅಬಕಾರಿ ಆಯುಕ್ತರು ಸನ್ನದು ಮಂಜೂರಾತಿಗೆ ಪೂರ್ವಾನುಮತಿ ನೀಡುತ್ತಿದ್ದು, ಅಬಕಾರಿ ಆಯುಕ್ತರಿಂದ ಪೂರ್ವಾನುಮತಿ ಪಡೆದ ನಂತರದಲ್ಲಿ ಸನ್ನದನ್ನು ಮಂಜೂರು/ಪರವಾನಗಿ ನೀಡುವ ಅಧಿಕಾರವು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುತ್ತದೆ.

ಕರ್ನಾಟಕ ಅಬಕಾರಿ (ಸನ್ನದುಗಳು ಸಾಮಾನ್ಯ ಷರತ್ತುಗಳು) ನಿಯಮಗಳು 1967 ರ ನಿಯಮ 5 ರನ್ವಯ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅಥವಾ ಕಂದಾಯ ಇಲಾಖೆಗೆ ಸಂಬಂಧಪಟ್ಟ ಯಾವುದೇ ಕಾನೂನು ಉಲ್ಲಂಘನೆಯಾಗಿದ್ದಲ್ಲಿ, ಸನ್ನದು ಮಂಜೂರಾತಿಗೆ ಪೂರ್ವಾನುಮತಿ ಸಂಬಂಧ ಪ್ರಸ್ತಾವನೆ ಸಲ್ಲಿಸುವ ಪೂರ್ವದಲ್ಲಿಯೇ ಅರ್ಜಿಯನ್ನು ತಿರಸ್ಕರಿಸಬಹುದಾಗಿರುತ್ತದೆ.ಒಂದು ವೇಳೆ,ಸನ್ನದು ಮಂಜೂರಾತಿಗೆ ಪೂರ್ವಾನುಮತಿ ನೀಡಿದ ನಂತರದಲ್ಲೂ ಸಹ, ಯಾವುದಾದರೂ ಆಕ್ಷೇಪಣೆಗಳು ಕಂಡು ಬಂದಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 30ರಂತೆ ಸನ್ನದನ್ನು ಹಿಂಪಡೆಯುವ ಅಧಿಕಾರವು ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುತ್ತದೆ. ಅಲ್ಲದೆ, ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ



File No. FD/54/ELQ/2025-EXCISE-FINANCE DEPT.SEC (Computer No. 1870572)
Generated from eOffice by Ramanna Balappa Timmapur, MIN-EXC(RBT), MINISTER, Minister - Excise on 08/08/2025 04:45 PM

29ರಂತೆ ಸನ್ನದನ್ನು ಅಮಾನತ್ತು/ ರದ್ದುಪಡಿಸುವ ಅಧಿಕಾರವು ಸಹ ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುತ್ತದೆ.

ಉದ್ದೇಶಿತ ಸನ್ನದು ಕಟ್ಟಡವು ಸಂಬಂಧಪಟ್ಟ ಪ್ರಾಧಿಕಾರದಿಂದ ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆದಿರಬೇಕು,ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ಸೌಲಭ್ಯವನ್ನು ಹೊಂದಿರಬೇಕು ಎಂಬ ಅಂಶಗಳು ಅಬಕಾರಿ ಕಾಯ್ದೆ/ನಿಯಮಗಳಲ್ಲಿ ನಿರ್ಧಿಷ್ಟವಾಗಿ ತಿಳಿಸದೇ ಇದ್ದರೂ ಸಹಾ,ಪಾನೀಕರ ಮತ್ತು ಸರ್ಕಾರದ ರಾಜಸ್ವದ ಹಿತದೃಷ್ಟಿಯಿಂದ ಸದರಿ ಅಂಶಗಳನ್ನು ಪಾಲಿಸಲು ಅಬಕಾರಿ ಆಯುಕ್ತರ ಸುತ್ತೋಲೆಗಳನ್ವಯ ಅಧೀನ ಕಛೇರಿಗಳ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

ಸಿಎಲ್-7 ಸನ್ನದುಗಳಲ್ಲಿ ಸನ್ನದು ಷರತ್ತುಗಳನ್ನು ಉಲ್ಲಂಘಿಸಿರುವ ಸಂಬಂಧ ಕಳೆದ ಮೂರು ವರ್ಷಗಳಲ್ಲಿ 11370 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಜಿಲ್ಲಾವಾರು ಮತ್ತು ವರ್ಷವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ,ಪಾರ್ಕಿಂಗ್ ವ್ಯವಸ್ಥೆ, ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ವ್ಯವಸ್ಥೆ ಒದಗಿಸದ ಕಟ್ಟಡಗಳಿಗೆ ಸನ್ನದು ಮಂಜೂರು ಮಾಡಿರುವ ಬಗ್ಗೆ ಯಾವುದೇ ಶಿಸ್ತು ಪ್ರಕರಣಗಳು ಇರುವುದಿಲ್ಲ.

**ಆಇ 54 ಇಎಲ್‌ಕ್ಯೂ 2025**

(ಆರ್.ಬಿ.ತಿಮ್ಮಾಪುರ)

**ಅಬಕಾರಿ ಸಚಿವರು**



File No. FD/54/ELQ/2025-EXCISE-FINANCE DEPT.SEC (Computer No. 1870572)

Generated from eOffice by Ramappa Balappa Timmapur, MIN-EXC(RBT), MINISTER, Minister - Excise on 08/08/2025 04:45 PM

# ಅನುಬಂಧ

**ಸನ್ನದು ಷರತ್ತುಗಳ ಉಲ್ಲಂಘನೆ ಸಂಬಂಧ ಸಿಎಲ್-7 ಸನ್ನದುಗಳ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ದಾಖಲಿಸಿರುವ ಪ್ರಕರಣಗಳ ಜಿಲ್ಲಾವಾರು ವಿವರ (ಜೂನ್ ರಿಂದ ಜುಲೈ ವರೆಗೆ)**

| ಕ್ರ ಸಂ | ಜಿಲ್ಲೆ | 2022-23 | 2023-24 | 2024-25 | TOTAL |
|---|---|---|---|---|---|
| 1 | Bagalkot | 90 | 101 | 95 | 286 |
| 2 | Belagavi North | 50 | 69 | 67 | 186 |
| 3 | Belagavi South | 36 | 57 | 47 | 140 |
| 4 | Dharwad | 47 | 45 | 49 | 141 |
| 5 | Vijayapura | 53 | 53 | 49 | 155 |
| 6 | BUD-01 | 51 | 68 | 111 | 230 |
| 7 | BUD-02 | 150 | 158 | 199 | 507 |
| 8 | BUD-03 | 138 | 179 | 137 | 454 |
| 9 | BUD-04 | 66 | 70 | 57 | 193 |
| 10 | Bengaluru Rural | 81 | 87 | 165 | 333 |
| 11 | Chikkaballapura | 34 | 52 | 93 | 179 |
| 12 | Bengaluru South | 27 | 31 | 54 | 112 |
| 13 | Tumakuru | 74 | 181 | 206 | 461 |
| 14 | BUD-05 | 29 | 41 | 68 | 138 |
| 15 | BUD-06 | 68 | 110 | 132 | 310 |
| 16 | BUD-07 | 31 | 35 | 48 | 114 |
| 17 | BUD-08 | 183 | 181 | 199 | 563 |
| 18 | Kolar | 175 | 178 | 250 | 603 |
| 19 | Chikkamagaluru | 46 | 66 | 52 | 164 |
| 20 | Davanagere | 27 | 23 | 24 | 74 |
| 21 | Haveri | 32 | 49 | 36 | 117 |
| 22 | Shivamogga | 43 | 84 | 75 | 202 |
| 23 | Ballari | 63 | 51 | 60 | 174 |
| 24 | Chitradurga | 46 | 41 | 42 | 129 |
| 25 | Gadag | 98 | 111 | 98 | 307 |
| 26 | Koppal | 125 | 122 | 89 | 336 |
| 27 | Vijayanagara | 2 | 16 | 17 | 35 |
| 28 | Bidar | 66 | 71 | 60 | 197 |
| 29 | Kalaburagi | 90 | 135 | 97 | 322 |
| 30 | Raichur | 49 | 64 | 45 | 158 |
| 31 | Yadgir | 35 | 50 | 28 | 113 |
| 32 | Dakshina Kannada | 119 | 149 | 154 | 422 |
| 33 | Kodagu | 46 | 71 | 65 | 182 |
| 34 | Udupi | 85 | 111 | 132 | 328 |
| 35 | Uttara Kannada | 21 | 45 | 23 | 89 |
| 36 | Chamarajanagara | 71 | 52 | 80 | 203 |
| 37 | Hassan | 331 | 381 | 350 | 1062 |
| 38 | Mandya | 139 | 177 | 198 | 514 |
| 39 | Mysuru | 144 | 158 | 114 | 416 |
| 40 | Mysuru Rural | 213 | 257 | 251 | 721 |
| **ಒಟ್ಟು** | | **3274** | **3980** | **4116** | **11370** |

ಆಇ 54 ಇಎಲ್‌ಕ್ಯೂ 2025